# ವಂದನೆ, ಅಭಿನಂದನೆ

ಮನುಷ್ಯನಿಗೆ ತನ್ನ ಹೆಸರು ಶಾಶ್ವವಾಗಿ ಉಳಿಯಬೇಕೆನ್ನುವ ಬಯಕೆ ಹಳೆಯದು. ಶಾಶ್ವತ ಎಂದರೆ ಎಷ್ಟು ಕಾಲ? ಅದು ಕಲ್ಪನೆಯೇ ಹೊರತು ಅದಕ್ಕೊಂದು ನಿರ್ದಿಷ್ಟ ಗಡಿಯಿಲ್ಲ. ತನ್ನ ಹೆಸರು ಜಗತ್ತಿನ ಎಲ್ಲರಿಗೆ ಗೊತ್ತಿದೆ, ತಾನು ಪ್ರಸಿದ್ಧ, ತನ್ನ ಕಲಾಕೃತಿಗಳನ್ನು ಜನರು ಮೆಚ್ಚುತ್ತಾರೆ, ತನ್ನ ಸಾಹಿತ್ಯಕೃತಿಗಳನ್ನು ಓದಿ ಬಹಳಷ್ಟು ಜನರು ರೋಮಾಂಚಿತರಾಗಿದ್ದಾರೆ, ತನ್ನ ನಟನೆಯ ಸಿನಿಮಾಗಳನ್ನು ನೋಡಿ ತನ್ನ ಬಿಂಬವನ್ನು ಅನೇಕರು ತಮ್ಮ ಎದೆಗಳಲ್ಲಿ ಬಚ್ಚಿಟ್ಟುಕೊಂಡಿದ್ದಾರೆ... ಹೀಗೆ ಅನೇಕ ಭ್ರಮೆಗಳು ಕಲಾಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಜನರಲ್ಲಿರುತ್ತವೆ. ಅಂತಹ ಭ್ರಮೆಗಳಿಂದ ಅವರು ಅನೇಕ ಹೊಸ ಸಾಹಸಗಳಿಗೆ ಆಗಾಗ ಪ್ರಯತ್ನಿಸುತ್ತಾರೆ. ಇಂತಹವರ ಕೆಲಸಗಳ ಬಗ್ಗೆ ಗೊತ್ತಿರುವ ಜನರ ಸಂಖ್ಯೆ ಎಂದಿಗೂ ತುಂಬ ಕಡಿಮೆಯೇ.

ನಮ್ಮ ಕೆಲವು ಲೇಖಕರನ್ನೇ ತೆಗೆದುಕೊಳ್ಳಿ. ತಮ್ಮ ಕೃತಿಗಳಿಂದ ಜನರು ಪಾವನರಾಗಿದ್ದಾರೆ ಎಂಬ ಗ್ರಹಿಕೆ ಅವರಲ್ಲಿರುತ್ತದೆ. ಅದಕ್ಕಾಗಿ ಅವರ ಶಿಷ್ಯೋತ್ತಮರಿಂದ 'ಸೂರಪ್ಪನವರ ಸಾಹಿತ್ಯ: ಒಂದು ಚಿಂತನೆ' ತರಹದ ಸೆಮಿನಾರುಗಳು, ಪಿಎಚ್.ಡಿ. ಅಧ್ಯಯನಗಳು ನಡೆಯುತ್ತವೆ. ಅವಕ್ಕೆಲ್ಲ ಆ ಸನ್ಮಾನ್ಯ ಲೇಖಕರೇ ತೆರೆಮರೆಯ ಮಾರ್ಗದರ್ಶಿಗಳು! ಅವರು ವಿಶ್ವವಿದ್ಯಾಲಯದಲ್ಲಿದ್ದ ಲೇಖಕರಾಗಿದ್ದರೆ ಮುಗಿದೇ ಹೋಯಿತು. ಉಳಿದದ್ದೆಲ್ಲ ಸುಲಭ. ಈ ನಿರ್ಲಜ್ಜ ವರ್ತನೆ ಒಂದೆಡೆಯಾದರೆ, ಅಭಿನಂದನಗ್ರಂಥ ತರುವುದು ಅದರದೇ ಇನ್ನೊಂದು ಭಾಗ. ಅವರ ಕುರಿತಾದ ಆ ಪುಸ್ತಕಕ್ಕೆ ಅವರೇ ಮೇಲ್ವಿಚಾರಕರು. ಶಿಷ್ಯರು, ಗೆಳೆಯರು, ಒಡನಾಡಿಗಳು, ಸಹಲೇಖಕರು ಬರೆದಿರುವ ಲೇಖನಗಳಿಂದ ಕೂಡಿದ ಆ ಗುಚ್ಛದ ಸಕಲ ಪುಟಗಳಲ್ಲೂ ಸ್ವತಃ ಆ ಲೇಖಕರೇ ಸಿನಿಮಾನಟರ ಕಟೌಟುಗಳೋಪಾದಿಯಲ್ಲಿ ರಾರಾಜಿಸುತ್ತಾರೆ. ಅವರ ಎಂದೂ ನಗದ, ಘನಗಂಭೀರ, ಪರ್ವತ ಸದೃಶ ವ್ಯಕ್ತಿತ್ವ ಮತ್ತು ಸಾಹಿತ್ಯದ ಗುಣಗಾನ ಪ್ರತಿಪುಟದಲ್ಲೂ ಕಂಗೊಳಿಸುತ್ತದೆ. ಅದನ್ನು ಕಣ್ತುಂಬಿಕೊಳ್ಳುವುದೇ ಓದುಗರ ಭಾಗ್ಯವಿಶೇಷಗಳಲ್ಲೊಂದು!

ಇಂತಹ ಪುಸ್ತಕಗಳು ಬೇಕು. ಅವು ಸಾಹಿತ್ಯ ಅಭಿಮಾನಿಗಳೇ ಗೌರವದಿಂದ ರೂಪಿಸಿದ್ದಾಗಿದ್ದರೆ ಉತ್ತಮ. ಆದರೆ, ತಾವೇ ಸಿದ್ಧಪಡಿಸಿಕೊಂಡ ಈ ಗ್ರಂಥಗಳಲ್ಲಿ ಇರುವುದು ಎಷ್ಟು ನಿಜ, ಎಷ್ಟು ಸುಳ್ಳು ಎಂಬುದನ್ನು ಅದಕ್ಕೆ ಕಾರಣರಾದ ಮಹಾಶಯರೇ ಹೇಳಬೇಕು. ಅದನ್ನು ಅವರು ಎಂದಿಗೂ ಹೇಳುವುದಿಲ್ಲ; ಹೇಳಿದರೆ ಅದನ್ನು ತಂದ ಉದ್ದೇಶವೇ ಮರೆಯಾದಂತೆ! ಹಾಗೆ ಬಂದ ಕೆಲವನ್ನು ತಮಾಷೆಯ ಪುಸ್ತಕಗಳಂತೆ ಓದಿ ಪಕ್ಕಕ್ಕಿಡಬಹುದು. ಲೇಖಕನ ಖಾಸಗಿ ವ್ಯಕ್ತಿತ್ವವನ್ನು ಸಾರ್ವಜನಿಕಗೊಳಿಸುವ ಇವು ಓದುಗರ ದೃಷ್ಟಿಯಿಂದ ಆನಂದ ಕೊಡುವ ಸಂಗತಿಯಾಗಿ ಉಳಿದಿಲ್ಲ. ತಮ್ಮ ಬಗ್ಗೆ ತಾವೇ ಅಭಿನಂದನಗ್ರಂಥ ಪ್ರಕಟಿಸಿಕೊಳ್ಳದ, ಇಲ್ಲವೇ ಬರದಂತೆ ನೋಡಿಕೊಂಡ ಸಾಹಿತಿಗಳೇ ನಿಜವಾದ ಅಭಿನಂದನೆಗೆ ಅರ್ಹರು. ಈಗೀಗ ಅದನ್ನು ಪ್ರಕಟಿಸುವುದು ಒಂದು ವ್ಯವಹಾರವಾಗಿದೆ. ಅದನ್ನು ಸಂಪಾದಿಸಿ ಕೊಡುವ ವೃತ್ತಿನಿರತ ವಿದ್ವಾಂಸರು, ವಿಮರ್ಶಕರಿದ್ದಾರೆ. ಅವರಿಗೆ ತನು, ಮನ, ಧನದಿಂದ ಆಸಕ್ತ ಲೇಖಕರು ಅರ್ಪಿಸಿಕೊಳ್ಳಬೇಕಷ್ಟೆ.

**ಸಂದೀಪ ನಾಯಕ**

